ಇ) ಸದ್ಯದ ಪರಿಸ್ಥಿತಿಯಲ್ಲಿ ಮಂಡಳಿಯು ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ 6 ಗಂಟೆಗಳ ಕಾಲ ನಿರ್ವಹಿಸುತ್ತಿರುವ ನಿಯಮಿತ ಲೋಡ್ ಷೆಡ್ಡಿಂಗ್ ಅನಿವಾರ್ಯ. ಅಲ್ಲದೆ ಕೆಲವೊಮ್ಮೆ ವಿದ್ಯುತ್ ಉತ್ಪಾದನೆ ಮತ್ತು ಪ್ರಸಾರಣಗಳಲ್ಲಿ ಉಂಟಾಗುವ ವ್ಯತ್ಯಯ, ತಾಂತ್ರಿಕ ತೊಂದರೆಗಳಿಂದ ಅನಿಯಮಿತ ಲೋಡ್ ಷೆಡ್ಡಿಂಗನ್ನು ಮಾಡಬೇಕಾಗುತ್ತದೆ. ಈ ಅನಿಯಮಿತ ಲೋಡ್ ಷೆಡ್ಡಿಂಗ್‌ನ ಅವಧಿಯನ್ನು ಆದಷ್ಟು ಕಡಿಮೆಗೊಳಿಸಲು ಮಂಡಳಿಯು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತದೆ. ಈ ವಿಷಯದಲ್ಲಿ ಎಲ್ಲಾ ವರ್ಗಗಳ ಗ್ರಾಹಕರುಗಳ ಸಹಕಾರ ಅತ್ಯಗತ್ಯವಾಗಿದೆ.

ರಾಮನಗರ – ಚನ್ನಪಟ್ಟಣ ಮಧ್ಯೆ ಕೈಗಾರಿಕಾ ಸಂಕೀರ್ಣ

1028 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರಾಜಧಾನಿಯಿಂದ ಕೇವಲ ಐವತ್ತು ಕಿ.ಮೀ. ದೂರದಲ್ಲಿರುವ ರಾಮನಗರ - ಚನ್ನಪಟ್ಟಣಗಳ ಮಧ್ಯೆ ಕೈಗಾರಿಕಾ ಸಂಕೀರ್ಣವೊಂದನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಬ್ರಾಡ್ ಗೇಜ್ ರೈಲು ಸೌಲಭ್ಯ ಮತ್ತು ರಸ್ತೆ ಸೌಕರ್ಯ ಸಾಕಷ್ಟಿರುವುದರಿಂದ ಈ ಪ್ರದೇಶ ಕೈಗಾರಿಕಾ ಪ್ರದೇಶವಾಗಲು ಸೂಕ್ತವಲ್ಲವೇ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು):

ಅ) ಇಲ್ಲ.

ಆ) ಈಗಾಗಲೇ ಕೈಗಾರಿಕಾ ಶೆಡ್ಡುಗಳನ್ನು ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕಾ ನಿಗಮವು ರಾಮನಗರದಲ್ಲಿ ಸ್ಥಳೀಯರಿಗೆ ಅನುಕೂಲವಾಗುವಂತೆ ಸ್ಥಾಪಿಸಿದೆ. ಹಾಗೂ ಮತ್ತೊಂದು ಪೋಟರಿ ಕಾಂಪ್ಲೆಕ್ಸ್ ಕಟ್ಟಡ ಕಟ್ಟಲಾಗುತ್ತಿದೆ. ಇದೆ ರೀತಿಯಾಗಿ ಚನ್ನಪಟ್ಟಣದಲ್ಲಿ ಕರಕುಶಲ ಕೈಗಾರಿಕಾಭಿವೃದ್ಧಿ ನಿಗಮವು ಕರಕುಶಲ ಕಾಂಪ್ಲೆಕ್ಸ್ ಅನ್ನು ಕಟ್ಟಿದೆ. ಮೇಲಿನ ಕಾರಣದಿಂದ ರಾಮನಗರ ಚನ್ನಪಟ್ಟಣಗಳ ಮಧ್ಯೆ ಕೈಗಾರಿಕಾ ಸಂಕೀರ್ಣ ಸ್ಥಾಪಿಸುವ ಅವಶ್ಯಕತೆ ಇರುವುದಿಲ್ಲ.

ಹುಬ್ಬಳ್ಳಿಯಲ್ಲಿರುವ ಪ್ರವಾಸಿ ಮಂದಿರದ ಬಗ್ಗೆ

1037 - ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ) :ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿರುವ ಪ್ರವಾಸಿ ಮಂದಿರವು ಹಳೆಯ ಕಟ್ಟಡವಾಗಿದ್ದು ಶಿಥಿಲಗೊಂಡಿರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಹಳೆಯ ಪ್ರವಾಸಿ ಮಂದಿರವನ್ನು ಕೆಡವಿ ಕನಿಷ್ಠ 25 ಕೊಠಡಿಗಳ ಹೊಸ ಪ್ರವಾಸಿ ಮಂದಿರವನ್ನು ನಿರ್ಮಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಇಲ್ಲ.

ಇ) ಈಗಿರುವ ಪ್ರವಾಸಿ ಮಂದಿರವು ಸುಸ್ಥಿತಿಯಲ್ಲಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.